INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -1, May-June, 2022,
PageNo,20-28
Peer Reviewed Journal, Referred Journal

# ಎಲ್.ಬಸವರಾಜು ಅವರ ಕಾವ್ಯದಲ್ಲಿ ಬದುಕು ಮತ್ತು ಸಾವಿನ ಚಿತ್ರಣ

**ಕಾವ್ಯ. ಜಿ.**[1]

ಹುಟ್ಟು ಮತ್ತು ಸಾವು ಬದುಕಿನ ಎರಡು ಮುಖಗಳು. ಹುಟ್ಟು ಅನಿರೀಕ್ಷಿತ ಸಾವು ಖಚಿತ. ಹುಟ್ಟಿದ ವ್ಯಕ್ತಿ ಸಾವಿನ ಕದ ತಟ್ಟದೆ ಚಿರಂಜೀವಿಯಾಗಿರಲು ಸಾಧ್ಯವಿಲ್ಲ. ಆದರೆ ಸಾವನ್ನು ಸಹಜವಾಗಿ ಸ್ವೀಕರಿಸಬೇಕಾದ ಮನಸ್ಥಿತಿಯನ್ನು ಎಲ್ಲರು ಬೆಳೆಸಿಕೊಳ್ಳಬೇಕಾದದ್ದು ಅನಿವಾರ್ಯ. ಹಾಗಾಗದಿದ್ದರೆ ವ್ಯಕ್ತಿ ಮುಂದಿನ ಬದುಕನ್ನು ಸುಖಮಯವಾಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಮನುಷ್ಯ ಆಶಾವಾದಿಯಾಗಿ ಬದುಕಲು ಕಲಿಯಬೇಕು. ಎಂತಹ ವಿಷಮ ಪರಿಸ್ಥಿತಿ ಎದುರಾದಾಗಲೂ ಧೃತಿಗೆಡದೆ ಮುನ್ನಡೆಯಬೇಕೆಂಬ ಪಾಠವನ್ನು ಎಲ್.ಬಸವರಾಜು ಅವರು ತಮ್ಮ ಕವಿತೆಗಳಲ್ಲಿ ಬೋಧಿಸಿದ್ದಾರೆ. ದಿಕ್ಕು ದೆಸೆ ಕಾಣದೆ ಕಂಗಾಲಾದ ಜೀವಕ್ಕೆ ಕವಿಯ ಮಾತುಗಳು ಸಾಂತ್ವನವನ್ನು, ಬದುಕಬೇಕೆಂಬ ಹಠ, ಛಲ ಹಾಗೂ ಆಶಾವಾದಿತನವನ್ನು ಮೂಡಿಸುತ್ತವೆ.

ಬದುಕಿನಲ್ಲಿ ನಾವು ನಿರೀಕ್ಷಿಸದ ಮಟ್ಟದಲ್ಲಿ ಸವಾಲುಗಳು, ಸೋಲು, ನೋವುಗಳು ಎದುರಾಗಿ ಮಾನಸಿಕ ಸ್ಥೈರ್ಯವೆಲ್ಲ ಕುಗ್ಗಿ ಬದುಕಿಗಿಂತ ಸಾವೇ ಸುಖವೆನಿಸಿದರೂ ಬದುಕಿನಿಂದ ವಿಮುಖವಾಗುವುದು ಸುಲಭವಲ್ಲ. ಹುಟ್ಟಿರುವುದು ಬದುಕುವುದಕ್ಕೆ ವಿನಃ ಸಾಯುವುದಕ್ಕಲ್ಲ ಎಂಬ ಆಶಾವಾದ ಕವಿಯಲ್ಲಿದೆ.

ಬದುಕಿಗಿಂತ ಸಾವೇ ಸುಖವೆನಿಸಿದರೂ
ಸಾಯುವುದು ಸುಲಭವಲ್ಲ!
ಬದುಕಿಗೆ ಬದುಕಿರುವುದೇ ತಾಯಿಬೇರು
ಧೈರ್ಯವೇ ಗೊಬ್ಬರ ನೀರು! (ಜಾಲಾರಿ, ಪು.ಸಂ ೨೨)

ಮನುಷ್ಯ ಬದುಕಿನ ಹಾದಿಯಲ್ಲಿ ಎದುರಾಗುವ ಸಂಕಷ್ಟಗಳನ್ನು ಮೀರಿನಿಂತು ಹೋರಾಡುವುದನ್ನು ಕಲಿಯಬೇಕು. ಧೈರ್ಯವಿದ್ದರೆ ಎಂತಹ ಸಂಕಷ್ಟಗಳನ್ನು ಬೇಕಾದರೂ ನಿಭಾಯಿಸಲು ಸಾಧ್ಯ. ಬದಲಾಗಿ ನಿರಾಶಭಾವದಿಂದ ಬದುಕನ್ನು ತ್ಯಜಿಸಿ ಸಾವಿಗೆ ಶರಣಾಗುವುದು

---

[1]. **ಸಂಶೋಧನ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು**

ಹೇಡಿಯ ಲಕ್ಷಣ. ಹಾಗಾಗಿ ಕವಿ ಇಲ್ಲ "ಬದುಕಿಗೆ ಬದುಕಿರುವುದೇ ತಾಯಿ ಬೇರು" ಎನ್ನುವ ಮೂಲಕ ಬದುಕಿನ ಮಹತ್ವವನ್ನು ಕಟ್ಟಿಕೊಟ್ಟಿದ್ದಾರೆ.

ಮೊಳೆ ಚೂಪು ಮಾಡಿ
ಚಾಟಿ ಹುರಿ ಮಾಡಿ
ಆಡೋಣ ಬನ್ನಿ ಬಂಗರದಾಟ!
ಯಾರ ಬಂಗರಕ್ಕೆ
ಎಷ್ಟು ಗುನ್ನ ಬಿದ್ದರೂ
ಯಾರೂ ಮುನಿಯುವಂತಿಲ್ಲ
ಆಡೋಣ ಬನ್ನಿ ಬಂಗರದಾಟ!
ವೀರನ ಮೈಯಲ್ಲಾದ
ರಣಗಾಯದ ಗುರುತಿನಂತೆ_
ಗುನ್ನ ಬಿದ್ದಷ್ಟು
ಬಂಗರಕ್ಕೆ ಭೂಷಣ
-----------------
ಆಡೋಣ ಬನ್ನಿ ಬಂಗರದಾಟ! (ಜಾಲಾರಿ, ಪು.ಸಂ 123)

"ಬದುಕನ್ನು ಒಂದು ಬಂಗರಕ್ಕೆ ಹೋಲಿಸಿ 'ಆಡೋಣ ಬನ್ನಿ ಬಂಗರದಾಟ' ಎಂದು ಕವಿ ಆಹ್ವಾನಿಸುತ್ತಾರೆ. ಮೈ ಮೇಲೆ ಬಿದ್ದ ಗುನ್ನಗಳೆಲ್ಲ ಅನುಭವದ ಸಂಕೇತಗಳಾಗುವ ಕಾರಣ 'ಆಟದ ಬಯಲನ್ನೇ ಕಾಣದೆ ಅಂಗಡಿಯಲ್ಲೇ ಉಳಿದಿರುವ ಬಂಗರ ಎಷ್ಟು ನುಣ್ಣಗಿದ್ದರೇನು?' ಎಂಬ ಪ್ರಶ್ನೆ ಅರ್ಥಪೂರ್ಣವಾಗಿದೆ." (ಜಾಲಾರಿ, ಪು 6)

ಬದುಕಿನಲ್ಲಿ ಸದಾಕಾಲ ಸುಖವೇ ಇರಲು ಸಾಧ್ಯವಿಲ್ಲ. ಕಷ್ಟಗಳು ಎದುರಾದಾಗ ಅದನ್ನು ಎದುರಿಸಬೇಕೆ ವಿನಃ ಬದುಕಿನಿಂದ ವಿಮುಖವಾಗಬಾರದು. ಕಷ್ಟಗಳು ಮನುಷ್ಯನನ್ನು ಗಟ್ಟಿಗೊಳಿಸುತ್ತವೆ. ಬದುಕಿನ ಪ್ರತಿಯೊಂದು ಅನುಭವವು ಯಾವ ವಿಶ್ವವಿದ್ಯಾನಿಲಯವು ಕಲಿಸಲಾಗದಂತಹ ಪಾಠವನ್ನು ಕಲಿಸುತ್ತದೆ ಎಂಬುದನ್ನಿಲ್ಲಿ ಕವಿ ಬಂಗರದ ಉದಾಹರಣೆ ಮೂಲಕ ಅಭಿವ್ಯಕ್ತಪಡಿಸಿದ್ದಾರೆ. ರಣರಂಗದಲ್ಲಿ ನಿಂತು ವೀರಾವೇಷದಿಂದ ಹೋರಾಡುವ ವೀರಯೋಧನ ಮೈಮೇಲಿನ ಗಾಯದ ಗುರುತುಗಳು ಆತನ ಶೌರ್ಯ, ಪರಾಕ್ರಮದ ಸಂಕೇತ. ಆದರೆ ಯುದ್ಧಕ್ಕೆ ಹೆದರಿ ಓಡಿಹೋಗುವುದು ವೀರನ ಲಕ್ಷಣವಲ್ಲ. ಹಾಗೆಯೆ ಬದುಕು ಕೂಡ ಒಂದು ಯುದ್ಧದಂತೆ ಎಂದು ಭಾವಿಸಿ ಎದುರಾಗುವ ಸಂಕಷ್ಟಗಳನ್ನು ಜಯಿಸಿ ಮುನ್ನಡೆಯಬೇಕೆಂಬುದನ್ನಿಲ್ಲಿ ಕವಿ ಮನೋಜ್ಞವಾಗಿ ಅಭಿವ್ಯಕ್ತಿಸಿದ್ದಾರೆ.

ಬದುಕಿನಲ್ಲಿ ಎಲ್ಲ ಸಮಯದಲ್ಲಿಯೂ ಬರಿ ಸಂತೋಷ, ಗೆಲುವೆ ತುಂಬಿರಲು ಸಾಧ್ಯವಿಲ್ಲ. ಬದುಕಿನಲ್ಲಿ ಕಷ್ಟ ಸುಖ, ಸೋಲು-ಗೆಲುವು ಸಹಜವಾಗಿದ್ದು ಅದನ್ನು ಸಹಜವಾಗಿಯೆ ಸ್ವೀಕರಿಸುವ ಮನೋಭಾವವನ್ನು ಎಲ್ಲರು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಸೋತಾಗಲೂ ಭರವಸೆಯಿಂದ ಬದುಕಲು ಸಾಧ್ಯ. ಆ ಭರವಸೆಯನ್ನು ತಮ್ಮ ಕವಿತೆಯ ಮೂಲಕ ಬಿತ್ತುತ್ತಿರುವ ಎಲ್.ಬಿ.

ಮಗು,
ಸೋತೆನೆಂದು
ಮನ ಜೋತು ಬಿಡಬೇಡ
ನೋಡಿಲ್ಲವೇ
ಪೀಲೆ ಮರಡೋನಾದಿ ಮಹಾವೀರರೂ
ಒದ್ದ ಚಂಡೆಲ್ಲ ಗೋಲಾಗುವುದಿಲ್ಲ
ಅಡ್ಡ ಬರುವ ಕಾಲುಗಳೂ ಉಂಟಲ್ಲವೆ? (ಜಾಲಾರಿ, ಪು.ಸಂ 95)

ಬದುಕು ಕೂಡ ಕ್ರೀಡಾ ಮೈದಾನವಿದ್ದಂತೆ ಆಟದಲ್ಲಿ ಒಮ್ಮೆ ಗೆದ್ದವ ಮತ್ತೊಮ್ಮೆ ಸೋಲಬಹುದು. ಒಮ್ಮೆ ಸೋತವ ಮತ್ತೊಮ್ಮೆ ಗೆಲ್ಲಬಹುದು. ಆದರೆ ಯಾವುದು ಶಾಶ್ವತವಲ್ಲ. ಹಾಗೆಯೆ ಬದುಕಿನಲ್ಲಿ ಕಷ್ಟವಾಗಲಿ, ಸುಖವಾಗಲಿ ಶಾಶ್ವತವಲ್ಲ. ಸೋಲು ಗೆಲುವಿನ ಮೆಟ್ಟಿಲು ಎಂಬುದನ್ನರಿತು ಬದುಕಬೇಕೆ ವಿನಃ ಸೋತ ಮಾತ್ರಕ್ಕೆ ಬದುಕೇ ಮುಗಿಯಿತೆಂಬ ನಿರಾಶವಾದವನ್ನು ತಾಳಬಾರದು. ಪ್ರಸಿದ್ಧ ಪುಟ್‌ಬಾಲ್ ಆಟಗಾರರಾದ ಪೀಲೆ, ಮರಡೋನರಂತಹ ಮಹಾವೀರರು ಸಹ ಎಲ್ಲ ಸಮಯದಲ್ಲೂ ಒದ್ದ ಚೆಂಡೆಲ್ಲಾ ಗೋಲಾಗಿಸಲು ಸಾಧ್ಯವಿಲ್ಲ. ಗೆಲ್ಲದಂತೆ ತಡೆಯುವ ಕಾಲುಗಳು ಜೊತೆಯಿರುತ್ತವೆ. ಹಾಗಾಗಿ ಎಲ್ಲ ಸಮಯದಲ್ಲೂ ಗೆಲುವೇ ತನ್ನದಾಗಬೇಕೆಂಬ ನಿರೀಕ್ಷೆ ವಾಸ್ತವಕ್ಕೆ ದೂರವಾದದು. ಸೋತವನನ್ನು ಸಾಂತ್ವಾನಗೊಳಿಸುತ್ತಿರುವ ಕವಿ ಸೋಲು ಗೆಲುವು ಎರಡನ್ನು ಬದುಕಿನಲ್ಲಿ ಸಮನಾಗಿ ಸ್ವೀಕರಿಸಬೇಕೆಂಬುದನ್ನು ಒತ್ತಿ ಹೇಳುತ್ತಾರೆ.

ಬದುಕೆಂಬುದು ಕ್ಷಣಿಕ. ಯಾವಾಗ ಸಾವು ನಮ್ಮನ್ನಾವರಿಸುತ್ತದೆಂಬುದು ಯಾರಿಗೂ ತಿಳಿಯದ ಸಂಗತಿ. ಸಾವನ್ನು ಗೆದ್ದು ಚಿರಂಜೀವಿಯಾಗಿ ಭೂಮಿ ಮೇಲೆ ಉಳಿಯುವುದು ಎಂತಹವರಿಂದಲೂ ಸಾಧ್ಯವಿಲ್ಲ. ಹಾಗಾಗಿ ಬದುಕಿರುವಷ್ಟು ಕಾಲ ಬದುಕನ್ನು ಹಸನಾಗಿಸಿಕೊಂಡು ಪರರಿಗೆ ಕೇಡು ಬಗೆಯದಂತಿರುವುದೇ ನಿಜವಾದ ಬದುಕೆಂಬ ತೀರ್ಮಾನಕ್ಕೆ ಬಂದಿರುವ ಕವಿ,

ಒಂದು ಕಾಲ ಮಿತಿಯಲ್ಲೇ ಆಗಲಿ
ಬದುಕೆಂಬುದು ನಮ್ಮ ಪಾಲಿಗಿರುವುದಾಗಿ
ಅದನ್ನು
ಇತರರು ಬದುಕಿಗೆ ಅವಾಂತರವಾಗದಂತೆ
ಬದುಕಿದವರ ಬದುಕೇ ಬದುಕು
ಆ ಬದುಕನ್ನು ಬದುಕು!
ಹಾಗಲ್ಲದವರ ತುಡುಗು ಬದುಕನ್ನು ಕಂಡರೆ
ಅವರನ್ನು ಹಿಡಿದು ತದುಕು! (ತುಳಿಯುವ ಕಾಲಿಗೆ ಬಿದ್ದೀರ, ಪು.ಸಂ 13)

ಎನ್ನುವ ಮೂಲಕ ಸಾರ್ಥಕ ಬದುಕನ್ನು ಬದುಕಬೇಕೆನ್ನುವ ಪಾಠವನ್ನು ಬೋಧಿಸುತ್ತ ನಾವು ಪರರಿಗೆ ಹೊರೆಯಾಗದಂತೆ, ತೊಂದರೆ ಕೊಡದಂತೆ ಬದುಕುವುದೇ ನಿಜವಾದ ಬದುಕಿನ

ರೀತಿಯೆಂಬುದನ್ನು ಮನವರಿಕೆ ಮಾಡಿಕೊಡುತ್ತಿದ್ದಾರೆ. ಮತ್ತೊಬ್ಬರ ಬಾಳಿಗೆ ಜ್ಯೋತಿಯಾಗದಿದ್ದರೂ ಪರವಾಗಿಲ್ಲ ಮತ್ತೊಬ್ಬರ ಬಾಳನ್ನು ಸುಡುವ ಬೆಂಕಿಯಾಗಬಾರದು. ಸಾರ್ಥಕ ಬದುಕನ್ನು ಎಲ್ಲರು ಬಾಳಬೇಕೆಂಬ ಆಶಯ ಕವಿಯದಾಗಿದೆ.

ದಿಕ್ಕು ತಪ್ಪಿತೆಂದು
ತಡವರಿಸಿ ಅತ್ತು
ತತ್ತರಿಸುವೆ ಯಾಕೆ
ದಿಕ್ಕು ದಿಕ್ಕೂ
ಆಯಾ ದಿಕ್ಕಿನಲ್ಲೇ ಇದೆ!
ನಿನ್ನ ತಾಯಿ ತಂದೆ ಪೂರ್ವ ದಿಕ್ಕು
ವಿದ್ಯಾಗುರು ಉತ್ತರ ದಿಕ್ಕು
ಹಿತವರು ದಕ್ಷಿಣ ದಿಕ್ಕು
ಯಾರಿಗೂ ಸ್ಪಷ್ಟ ಗೋಚರಿಸದು ಪಶ್ಚಿಮ ದಿಕ್ಕು!
ಕಣ್ಣೊರಸಿಕೋ
ಕಾಲಗಾಧಾರವಾಗಿ
ಭೂಮಿ ನಿಶ್ಚಲವಾಗಿದೆ! (ಜಾಲಾರಿ, ಪು.ಸಂ 126)

ಮನುಷ್ಯ ಸೋತು ಕಂಗಾಲಾದಾಗ, ತಪ್ಪು ನಿರ್ಧಾರ ತೆಗೆದುಕೊಂಡು ಮೋಸ ಹೋದಾಗ ಬದುಕಿನಲ್ಲಿ ಎಡವಿದಾಗ ದುಃಖ ಸಹಜ. ಆದರೆ ತಾನು ದಿಕ್ಕು ತಪ್ಪಿದೆನೆಂದು ಭರವಸೆಯೇ ಇಲ್ಲದಂತೆ ಬದುಕಬಾರದು. ತಂದೆ ತಾಯಿ ಆಶೀರ್ವಾದ ಪ್ರೀತಿ, ಮಮತೆ, ಸಹಕಾರ ಮಕ್ಕಳಿಗಿದ್ದೇ ಇರುತ್ತದೆ. ಮಾರ್ಗ ತೋಚದಾದಾಗ ಗುರುವಾದವನು ಸರಿದಾರಿಯಲ್ಲಿ ನಡೆಸುತ್ತಾನೆ. ಹಾಗೆಯೆ ನಮ್ಮ ಒಳಿತು ಬಯಸುವವರು ಸದಾ ನಮ್ಮೊಟ್ಟಿಗಿರುತ್ತಾರೆ. ಆದರೆ ಸಾವೆಂಬುದು ಯಾರು ಅರಿಯದ ರಹಸ್ಯ ಹಾಗಾಗಿ ಪಶ್ಚಿಮ ದಿಕ್ಕಿನ ಸ್ಪಷ್ಟ ಅರಿವು ಯಾರಿಗೂ ಇರುವುದಿಲ್ಲ. ದಿಕ್ಕು ತಪ್ಪಿದ ಜೀವಕ್ಕೆ ಕವಿ ಹೇಳುವ ಸಾಂತ್ವಾನದ ನುಡಿಗಳು ಅದ್ಭುತವಾಗಿವೆ. 'ಕಣ್ಣೊರಸಿಕೋ ಕಾಲಗಾಧಾರವಾಗಿ ಭೂಮಿ ನಿಶ್ಚಲವಾಗಿದೆ' ಎಂಬ ಮಾತುಗಳು ಎಲ್ಲರೂ ಕೈ ಬಿಟ್ಟರೆಂದು ದುಃಖಿಸುವಾಗಲು, ಸೋತು ಹೋದನೆಂದು ಕುಗ್ಗಿದಾಗಲೂ ಮರಳಿ ಬೆಳೆಯಬೇಕೆಂಬ, ಬದುಕನ್ನು ಕಟ್ಟಿಕೊಳ್ಳಬೇಕೆಂಬ ಛಲವನ್ನು ಮೂಡಿಸುವುದರಲ್ಲಿ ನೆರವಾಗಿವೆ.

ಭರವಸೆಯು ಬದುಕಿನ ಆಶಾಕಿರಣವಾಗಿ ಕತ್ತಲಲ್ಲೂ ಬೆಳಕಾಗಿ ದಾರಿ ತೋರುತ್ತದೆ. ಹಾಗಾಗಿ ಮನುಷ್ಯ ಭರವಸೆಯಿಂದ ಬಾಳದೆ ಭಯದಿಂದ ಬದುಕಬಾರದು ಎಂಬುದನ್ನು ಹೇಳುತ್ತಾರೆ.

ಭರವಸೆಯಿಲ್ಲದಾಗ ಭಯವೂ
ಭಯವಿಲ್ಲದಾಗ ಭರವಸೆಯೂ

ಹಿಡಿದಾಡಿಸುವುದು ನಮ್ಮನ್ನು
ಭರವಸೆಯ ಕೈ ಕಳಚಿಕೊಂಡು
ಭಯದ ಕೈಹಿಡಿಯ ಬೇಡ
ಏನನ್ನಾದರೂ ಹಿಡಿಯುವುದು
ಮುಳುಗುವುದಕ್ಕಲ್ಲವಲ್ಲ? (ಜಾಲಾರಿ, ಪು.ಸಂ 95)

ನೀರಿನಲ್ಲಿ ಮುಳುಗಿದ ವ್ಯಕ್ತಿ ಪ್ರಾಣ ಉಳಸಿಕೊಳ್ಳಲು ಪರದಾಡುವಾಗ ಒಂದು ಹುಲ್ಲು ಕಡ್ಡಿ ಸಿಕ್ಕರೂ ಅದನ್ನಿಡಿದು ಜೀವ ಉಳಸಿಕೊಳ್ಳಲು ಬಯಸುತ್ತಾನೆ. ನೀರಿನಲ್ಲಿ ಮುಳುಗಿದವನಿಗೆ ಹುಲ್ಲು ಕಡ್ಡಿಯೂ ಆಸರೆಯಾಗುವಂತೆ ಭರವಸೆಯೆ ಎಲ್ಲರ ಬದುಕಿಗೂ ಆಸರೆಯಾಗಬೇಕು. ಬದುಕಿನಲ್ಲಿ ಭರವಸೆ ಇಲ್ಲದಾದಾಗ ಭಯ ನಮ್ಮನ್ನಾಳುತ್ತದೆ ಆದರೆ ಎಂತಹ ಸಂಕಷ್ಟದ ಸಂದರ್ಭದೊಳಗೂ ಮನುಷ್ಯ ಭರವಸೆಯಿಂದ ಇದ್ದರೆ ಎಂತದ್ದೇ ಸಂದರ್ಭವನ್ನು ಸಮತೂಕದಿಂದ ನಿಭಾಯಿಸಬಲ್ಲ. ಹಾಗಾಗಿ ಮನುಷ್ಯ ಭಯದ ಕೈ ಹಿಡಿವ ಬದಲು ಭರವಸೆಯ ಹಾದಿಯಲ್ಲಿ ಸಾಗಬೇಕೆಂಬ ಸದಾಶಯ ಕವಿತೆಯಲ್ಲಿದೆ.

ಮನುಷ್ಯನ ಬದುಕಿನಲ್ಲಿ ಸಾವು ಅನಿವಾರ್ಯ. ಅದನ್ನು ಜಯಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸಾವಿನ ಭಯವಿಲ್ಲದೆ ಬದುಕಲು ಸಾಧ್ಯ ಎಂಬುದನ್ನು ಎಲ್.ಬಸವರಾಜು ಅವರ ಕವಿತೆಗಳು ಕಟ್ಟಿಕೊಡುತ್ತವೆ. ಸಾವನ್ನು ಸಹಜವಾಗಿ ಸ್ವೀಕರಿಸುವ ಮನೋಭಾವವನ್ನು ಬೆಳೆಸುತ್ತವೆ. ಸಾವಿಗಿಂತ ಬದುಕು ಮುಖ್ಯ ಎಂಬ ವಾಸ್ತವವನ್ನು ಎತ್ತಿಹಿಡಿಯುತ್ತವೆ.  ಸಾವಿನ ದುಃಖದಿಂದ ಹೊರಬಂದು ಬದುಕನ್ನು ಸಾಗಿಸುವ ರೀತಿಯನ್ನು ಕಲಿಸುತ್ತವೆ.

ಹಾಲು ಕುಡಿವ ಹಸುಳೆ
ಸತ್ತ ಮನೆಯಲ್ಲಿ
ಹಾಲು ಕರೆವುದು ಹಸು!
ಹೂ ಮುಡಿದ ವಧು
ಸತ್ತ ಮನೆಯಲ್ಲಿ ಹೂ ಬಿಡುವುದು ಮಾವು!
ಇಲ್ಲದಿದ್ದರೆ
ಉಳದು ಅತ್ತವರು
ಬದುಕುವುದು ಹೇಗೆ!
ಸಾವನೆದುರಿಸಿ
ಜೀವ ಜಯಿಸುವುದು ಹೇಗೆ!
ಬಿರಿದ ಎದೆ
ಜೇನು ತೊರೆಸುವುದು ಹೇಗೆ! (ಠಾಣಾಂತರ, ಪು.ಸಂ 134)

ಸಾವು ಯಾರನ್ನೂ ಬಿಟ್ಟಿಲ್ಲ. ಸಾವಿಗೆ ಬಡವ-ಬಲ್ಲಿದ, ದೊಡ್ಡವರು-ಚಿಕ್ಕವರು ಎಂಬ ಭೇದವಿಲ್ಲ. ಸಾವು ಎಲ್ಲರಲ್ಲೂ ದುಃಖವನ್ನು ತರುತ್ತದೆ. ಮನಸ್ಸನ್ನು ಬಾಧಿಸುತ್ತದೆ. ಆದರೆ ಅದೇ ದುಃಖದೊಳಗೆ ಮನುಷ್ಯ ಬದುಕು ಸಾಗಿಸಲು ಸಾಧ್ಯವಿಲ್ಲ. ದೇವರು ಮನುಷ್ಯನಿಗೆ ಮರೆವಿನ ಶಕ್ತಿ ಕೊಟ್ಟಿದ್ದಾನೆ. ಇದನ್ನು ಒಂದು ವರವೆಂದು ಭಾವಿಸಿ; ಮನುಷ್ಯ ನೋವು, ದುಃಖಗಳನ್ನು ಮರೆತು ಮುನ್ನಡೆಯಬೇಕು. ಭರವಸೆಯಿಂದ ಬದುಕುವುದನ್ನು ವ್ಯಕ್ತಿ ಕಲಿಯಬೇಕೆಂಬುದನ್ನಿಲ್ಲಿ ಕವಿ ತಿಳಿಸಿದ್ದಾರೆ. ನಮ್ಮ ಮನೆಯವರ, ಆತ್ಮೀಯರ ಅಗಲಿಕೆ ನಮ್ಮ ಮನವನ್ನು ಕಾಡದೆ ಇರದು. ಒಬ್ಬರ ಸಾವು ಅನೇಕರನ್ನು ದುಗುಡದೊಳಗೆ ಮುಳುಗಿಸುತ್ತದೆ. ಕವಿ ಹೇಳಿರುವಂತೆ ಹಾಲು ಕುಡಿವ ಹಸುಗೂಸು ಸತ್ತ ಮನೆಯಲ್ಲಿ ಕೂಡ ಹಸು ಹಾಲು ಕರೆಯುತ್ತದೆ, ಹೂ ಮುಡಿದು ಸಂತೋಷದಿಂದ ಬದುಕಿದ ವಧು ಸತ್ತ ಮನೆಯಲ್ಲಿ ಕೂಡ ಮಾವು ಹೂ ಬಿಡುತ್ತದೆ ಎಂಬ ಮಾತುಗಳು ಸಾವನ್ನು ಸಹಜವಾಗಿ ಸ್ವೀಕರಿಸಲೇಬೇಕಾದ ಅನಿವಾರ್ಯತೆಯನ್ನು ಒತ್ತಿ ಹೇಳುತ್ತವೆ. ಸಾವಿನ ನೋವನ್ನು ಮರೆತು; ನೋವನ್ನು ಉಂಡ ಎದೆಯಲ್ಲಿ ಕೂಡ ಜೇನು ಹರಿಯಬೇಕೆಂಬುದಾಗಿ ಹೇಳುತ್ತ ಸಾವಿನ ನೋವಿನಿಂದ ಆಚೆ ಬರಬೇಕೆಂಬ ಸತ್ಯವನ್ನು, ವಾಸ್ತವವನ್ನಿಲ್ಲಿ ಕವಿ ತೆರೆದಿಟ್ಟಿದ್ದಾರೆ.

ಎಲ್ಲರು ಕೂಡ ತಮ್ಮ ಇಚ್ಛೆಯಂತೆ ಬದುಕು ಕಟ್ಟಿಕೊಳ್ಳಲು ಬಯಸುತ್ತಾರೆ. ಆದರೆ ಸಾವು ಯಾರ ಇಚ್ಛೆಗೆ ಅನುಗುಣವಾಗಿಯೂ ಬರುವುದಿಲ್ಲ. ಆದರೆ ಕವಿ ಇಲ್ಲಿ ಸಾವು ತನ್ನನ್ನು ಯಾವ ರೀತಿ ಕರೆದೊಯ್ಯಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಸಾವಿಗೆ ಹೆದರದೆ ಅದನ್ನು ಕೂಡ ಧೈರ್ಯದಿಂದಲೇ ಸ್ವೀಕರಿಸಬೇಕೆಂಬ ದಿಟ್ಟತನವನ್ನಿಲ್ಲಿ ಕವಿ ವ್ಯಕ್ತಪಡಿಸಿದ್ದಾರೆ.

ಶ್ರೀ ಯಮರಾಜ<br>
ನನ್ನ ಸರದಿ ಬಂದಾಗ<br>
ಕೈಯಲ್ಲಿ ವಿಷಪೂರ್ಣ ಕುಂಭ ಹಿಡಿದು<br>
ನಸುನಗುತ್ತಾ ಬಾ,<br>
ಉಸಿರೆತ್ತದೆ ಹೀರುವೆನು ನಾನೆ<br>
ಮತ್ತೇರಿ ನಿನ್ನ ರಥವನ್ನೇರುವೆನು<br>
ಸಂಶಯಿಸಬೇಡ<br>
ಇದು ಸಜ್ಜನರ ಒಡಂಬಡಿಕೆ!<br>
-------------------<br>
ಇದೇ ನನ್ನ ಅಂತಿಮ ಕೋರಿಕೆ! (ಚಾಯಿಬಾಬಾ, ಪು.ಸಂ 40)

ಕವಿ ಇಲ್ಲಿ ತನ್ನ ಸಾವು ಹೇಗೆ ಇರಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಸಾವು ಸಹ ಸುಖವಾಗಿ ಬರಬೇಕು, ಸಾವಿನಲ್ಲಿ ಯಾವುದೇ ನರಳಾಟವಿರಬಾರದೆಂಬ ನಿಲುವು ಕವಿಯದಾಗಿದೆ. ಸಾವಿನ ಅಧಿಪತಿಯಾದ ಯಮನನ್ನು ಕವಿ ಇಲ್ಲಿ ಕೈಯಲ್ಲಿ ವಿಷಪೂರ್ಣ ಕುಂಭವಿಡಿದು ಬಾ ನಾನು ಉಸಿರೆತ್ತದೆ ಹೀರುವೆನು ಎಂದು ಕೇಳಿಕೊಳ್ಳುತ್ತಿದ್ದಾರೆ. ಜೊತೆಗೆ ಯಮನಲ್ಲಿ ಮತ್ತೊಂದು

ಕೋರಿಕೆಯನ್ನು ಇಡುತ್ತಿದ್ದಾರೆ. "ಊರಲ್ಲಿ ಉಪದ್ರವ ಮಾಡುವ ನಾಯಿ ಹಂದಿಗಳಿಗೆ ಕುಣಿಕೆ ಬೀಸಿ ಹತ್ತು ಜನ ನೋಡುವಂತೆ ಕಿರುಗುಟ್ಟಿಸಿ ಎಳೆದೊಯ್ಯುವ ಕ್ರಮ ಬೇಡ ಇದೇ ನನ್ನ ಅಂತಿಮ ಕೋರಿಕೆ" ಎನ್ನುವ ಮೂಲಕ ಸಾವು ಯಾವುದೇ ಯಾತನೆಯಿಲ್ಲದೆ ಶಾಂತವಾಗಿ ಸಂಭವಿಸಬೇಕೆಂಬ ನಿಲುವನ್ನಿಲ್ಲಿ ಕವಿ ವ್ಯಕ್ತಪಡಿಸಿದ್ದಾರೆ.

ಮತ್ತೊಂದು ಪದ್ಯದಲ್ಲಿ ಕೂಡ ಸಾವಿಗೆ ಸಮೀಪವಾಗುತ್ತಿರುವ ವೃದ್ಧನ ಚಿತ್ರವನ್ನು ಗಡಿಯಾರದ ಪ್ರತಿಮೆ ಮೂಲಕ ವಿವರಿಸಿದ್ದಾರೆ.

ಹಣೆಯ ತುಂಬ
ಅಂಕಿ ಗೆರೆ,
ನಿಂತ ಕೈ
ಅಲ್ಲಾಡದ ಲೋಲಕ!
ಮನೆಯೊಡೆಯನ
ಮುಗಿದ ಜಾತಕವ
ಗೋಡೆಗಂಟಿಸಿದಂತಿದೆ ಗಡಿಯಾರ!
ಟಿಕ್ ಟಿಕ್ ಶಬ್ಧವೂ ಸ್ತಬ್ದ
ಡಾಣಾ ಡಂಗುರವೂ ನಿಶ್ಯಬ್ಧ! (ಠಾಣಾಂತರ, ಪು.ಸಂ 146)

ಚಲನೆಯಿಲ್ಲದೆ ಸ್ತಬ್ಧವಾದ ಗಡಿಯಾರದ ಪ್ರತಿಮೆಯ ಮೂಲಕ ಕವಿ ಇಲ್ಲಿ ವೃದ್ಧನ ಚಿತ್ರವನ್ನು ಕಟ್ಟಿಕೊಡುತ್ತಿದ್ದಾರೆ. ಮುಖದಲ್ಲಿನ ಸುಕ್ಕು, ದೇಹದ ಶಕ್ತಿ ಕುಂದುವಿಕೆ, ನಿಯಂತ್ರಣ ಕಳೆದುಕೊಳ್ಳುವಿಕೆ ವೃದ್ಧರ ಸಾಮಾನ್ಯ ಲಕ್ಷಣ ಗಡಿಯಾರ ತನ್ನ ಚಲನೆ ಕಳೆದುಕೊಂಡು ನಿಂತಿರುವ ದೃಶ್ಯ ಮನೆಯೊಡೆಯ ಸಾವಿಗೆ ಸಮೀಪಿಸುತ್ತಿರುವಿಕೆಯನ್ನು ಬಿಂಬಿಸುತ್ತಿದೆ. ಮನೆಯನ್ನಾವರಿಸಿರುವ ನಿಶಬ್ಧತೆ ಬದುಕನ್ನು ಆವರಿಸುವ ಕಾಲ ಸನ್ನಿಹಿತವಾಗುತ್ತಿರುವಿಕೆಯನ್ನಿಲ್ಲಿ ಕವಿ ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ಹುಟ್ಟಿದ ಮನುಷ್ಯ ಬಾಲ್ಯ, ಯೌವನ, ವೃದ್ಧಾಪ್ಯ ಹೀಗೆ ಈ ಘಟ್ಟಗಳನ್ನು ತಲುಪುವುದು ಸಹಜ. ಅಂತಿಮವಾಗಿ ಎಲ್ಲರೂ ಸಾವಿನ ಕದ ತಟ್ಟದೇ ಇರಲು ಸಾಧ್ಯವಿಲ್ಲ. ವೃದ್ಧಾಪ್ಯದಲ್ಲಿ ಮನುಷ್ಯನ್ನನು ಸಾವೆಂಬುದು ಭಯವಾಗಿ ಕಾಡುತ್ತದೆ. ಮನುಷ್ಯ ಎಷ್ಟೇ ಧೈರ್ಯವಂತನಾದರೂ ಸಾವು ಎಂದಾಗ ಭಯಬೀಳುತ್ತಾನೆ. ಆದರೆ ಆ ಸಾವು ನಮಗೆ ಸಮೀಪವಾಗುತ್ತಿರುವುದನ್ನು ನಮ್ಮ ಮೈ ಮೇಲಿನ ಚರ್ಮವೇ ತಿಳಿಸುತ್ತದೆ.

ಸಾವೆನ್ನುವುದು ತಪ್ಪಿದ್ದಲ್ಲ!
ಅದಿನ್ನು ಬರುವ ಹೊತ್ತಾಯಿತೆನ್ನುತ್ತಿರುವುದು
ಮುದುಕರ ಮೈ ಮೇಲೆ
ಚಿತ್ರಗುಪ್ತರು ಬರೆದ ಸುಕ್ಕಿನ ಭಾಷೆ!
(ಅಲ್ಲಮನು ಮೈಮೇಲೆ ಬಂದಾಗ ಕಾಮಲತೆಯ ಕನವರಿಕೆಗಳು ಪು.ಸಂ 170)

ಸಾವಿಗೂ ಭಾಷೆಯಿದೆ ಎಂಬುದನ್ನು ಕವಿ ಹೇಳುವ ಮೂಲಕ ಸಾವನ್ನು ಧೈರ್ಯದಿಂದ ಸ್ವೀಕರಿಸಬೇಕೆಂಬುದನ್ನಿಲ್ಲಿ ತಿಳಿಸಿದ್ದಾರೆ.

ಮನುಷ್ಯನ ವಯಸ್ಸು ಜಾರುತ್ತಿದ್ದಂತೆ ವಿವಿಧ ರೋಗಗಳ ಗೂಡಾಗಿ ದೇಹ ಮಾರ್ಪಡುವುದಲ್ಲದೆ ಸಾವಿನ ಸಮೀಪವಾಗುವಿಕೆಯನ್ನಿಲ್ಲಿ ಕವಿ ಅಭಿವ್ಯಕ್ತಿಸಿದ್ದಾರೆ.

ಅಜ್ಜ
ನಿನ್ನ ಕೈ ಕಾಲು ಮೈಯೆಲ್ಲ
ನಡುಗುತ್ತಿದೆಯೇಕೆ?
ಮಗು,
ತಿರುವುಗಳನ್ನೆಲ್ಲ ಬಿಗಿಮಾಡುವ
ಕಾಲಪುರುಷನಿನ್ನೂ ಬಂದಿಲ್ಲವಪ್ಪ! [ಠಾಣಾಂತರ ಪು–46]

ಅಜ್ಜ ಮೊಮ್ಮಗನ ಸಂಭಾಷಣೆ ರೂಪದಲ್ಲಿ ಕವಿ ಕಾವ್ಯಾತ್ಮಕವಾಗಿ ಸಾವಿಗೆ ಹತ್ತಿರವಾಗುತ್ತಿರುವ ವೃದ್ಧನ ಚಿತ್ರಣವನ್ನು ನೀಡಿದ್ದಾರೆ. ವಯಸ್ಸಾದಂತೆ ದೇಹ ತನ್ನ ಶಕ್ತಿ ಕಳೆದುಕೊಳ್ಳುತ್ತದೆ. ಕೈ ಕಾಲು ಮೈಯೆಲ್ಲ ನಡುಗುತ್ತದೆ. ನಿಯಂತ್ರಣ ತಪ್ಪದಂತೆ ನಡೆಯಲು ಕೈಯಲ್ಲಿ ಊರುಕೋಲು ಹಿಡಿಯಬೇಕಾಗುತ್ತದೆ. ಮತ್ತೊಬ್ಬರಿಗೆ ಪರಾವಲಂಬಿಯಾಗಿ ಜೀವಿಸಬೇಕಾಗುತ್ತದೆ. ಸಾವು ಒಮ್ಮೆ ಬಂದರೆ ಈ ಎಲ್ಲ ಚಡಪಡಿಕೆಯೂ ಇಲ್ಲದಂತಾಗುತ್ತದೆಂಬ ಭಾವ ವೃದ್ಧನ ಮಾತಿನಲ್ಲಿದೆ.

ಹೀಗೆ ಎಲ್.ಬಸವರಾಜು ಅವರ ಕವಿತೆಗಳು ಬದುಕಬೇಕಾದ ರೀತಿಯನ್ನು ಹಾಗೂ ಸಾವಿನ ಅನಿವಾರ್ಯತೆಯನ್ನು ಹೇಳುತ್ತವೆ. ಜೀವಿಯ ಬದುಕಿನಲ್ಲಿ ಸಾವು ಅನಿವಾರ್ಯ ಹಾಗೂ ಅಂತಿಮಗಟ್ಟ ಎಂಬ ಸತ್ಯವನ್ನಿಲ್ಲಿ ತೆರೆದಿಟ್ಟಿದ್ದಾರೆ. ಬಾಳುಸ್ವೀಕಾರಾರ್ಹವೇ ವಿನಃ ನಿರಾಕರಣೆಗಲ್ಲ ಎಂಬ ಆಶಾವಾದ ಇವರ ಕವಿತೆಗಳಲ್ಲಿದೆ. ಬದುಕನ್ನು ಬಂದಹಾಗೆ ಸ್ವೀಕರಿಸುವ, ಸರಳವಾಗಿ ಬದುಕುವ ಕಲೆಯನ್ನು ಇವರ ಕವಿತೆಗಳು ತಿಳಿಸುತ್ತವೆ. ಬದುಕಿನಲ್ಲಿ ಎದುರಾಗುವ ಸೋಲು ಗೆಲುವನ್ನು ಸಮನಾಗಿ ಸ್ವೀಕರಿಸಬೇಕು. ಸಾವಿನಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಹೇಳುತ್ತಲೇ ಸಾವಿಗೆ ಭಯಪಡುವ ಅಗತ್ಯವಿಲ್ಲ ಎಂಬುದನ್ನು ತಿಳಿಸಿದ್ದಾರೆ. ಸಾವಿಗಿಂತ ಬದುಕು ಮುಖ್ಯ, ಸಾವಿನ ದುಃಖದಿಂದ ಪಾರಾಗಿ ಬದುಕುವ ರೀತಿಯನ್ನು ಅವರ ಕವಿತೆಗಳು ತೆರೆದಿಡುತ್ತವೆ. ಸಾವಿನ ಬಗೆಗಿರುವ ಭಯವನ್ನು ಇವರ ಕವಿತೆಗಳು ದೂರಾಗಿಸುತ್ತವೆ. ಅಲ್ಲದೆ ಬದುಕಬೇಕೆಂಬ ಸ್ಥೈರ್ಯ, ಛಲವನ್ನು ತುಂಬುವ ಮೂಲಕ ಮನುಷ್ಯನಲ್ಲಿ ಬದುಕಿನ ಬಗೆಗೆ ಭರವಸೆ ಹಾಗೂ ಹಂಬಲವನ್ನು ಹುಟ್ಟಿಸುತ್ತವೆ.

## ಆಕರ ಗ್ರಂಥಗಳು

1. ಬಸವರಾಜು.ಎಲ್– ಠಾಣಾಂತರ ಪರಿಸರ ಸಾಹಿತ್ಯ ಪ್ರಕಾಶನ ಶಿವಮೊಗ್ಗ 1994

2. ಬಸವರಾಜು.ಎಲ್. – ಜಾಲಾರಿ ವೈದ್ಯವಾರ್ತಾ ಪ್ರಕಾಶನ ಮೈಸೂರು,1999

3.ಬಸವರಾಜು.ಎಲ್. – ಚಾಯೀ ಬಾಬಾ,ವೈದ್ಯವಾರ್ತಾ ಪ್ರಕಾಶನ,ಮೈಸೂರು,2005

4.ಬಸವರಾಜು.ಎಲ್.– ಅಲ್ಲಮನು ಮೈ ಮೇಲೆ ಬಂದಾಗ ಕಾಮಲತೆಯ ಕನವರಿಕೆಗಳು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು. 2010

5. ಬಸವರಾಜು.ಎಲ್.– ತುಳಯುವ ಕಾಲಗೆ ಬಿದ್ದೀರ, ಪ್ರಗತಿ ಗ್ರಾಫಿಕ್ಸ್,ಬೆಂಗಳೂರು.2011